ದಿನಾಂಕ 19-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜಿ.ಎಸ್.ಕೆ ವಕೀಲರಿಂದಃ**

1. ನಾನು ಕೂಲಿ ಕೆಲಸ ಮಾಡುತ್ತೇನೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಸಂಖ್ಯೆ ಎಷ್ಟು ಎಂದು ಕೇಳಲಾಗಿ ಸಾಕ್ಷಿಯು ತನ್ನ ಕೈನ ಮೇಲೆ ಬರೆದುಕೊಂಡಿರುವುದನ್ನು ನೋಡಿಕೊಂಡು ಆಸ್ತಿ ಸಂಃ 45/ಎ ಮತ್ತು 45/ಎ 1 ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ವಾದಿಯರಿಗೆ ಪಂಚಾಯಿತಿಯಿಂದ ನೀಡಿದ್ದು, ಅದರಂತೆ ಅಲ್ಲಿ ಮನೆಯನ್ನು ಕಟ್ಟಿರುತ್ತಾರೆ. ದಾವಾ ಆಸ್ತಿಗಳನ್ನು ಅವರಿಗೆ ಯಾವ ಆಧಾರದ ಮೇಲೆ ನೀಡಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿಯು ಮೊದಲಿಗೆ ವಾದಿಯರು ಅಲ್ಲಿ ಮನೆ ಕಟ್ಟಿದ್ದು ಅದರಂತೆ ಪಂಚಾಯಿತಿಯವರು ದಾಖಲೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಗಳ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಪೂ- ಶಾಲೆ, ಪ- ಗಂಗವ್ವ ಹನಕನಹಳ್ಳಿ ರವರ ಮನೆ, ಉ- ಸರಕಾರಿ ರಸ್ತೆ ಮತ್ತು ದ- ಗುರುಲಿಂಗಪ್ಪ ನಿಂಬಣ್ಣನವರ ಜಮೀನು ಇವೆ. ಸದರಿ ಚಕ್ಕುಬಂದಿಗಳು ಪಂಚಾಯಿತಿ ಆಸ್ತಿಯಾದ ವಿಪಿಸಿ ನಂಃ 3 ಕ್ಕೆ ಸಂಬಂಧಿಸಿದ ಚಕ್ಕುಬಂದಿಗಳು ಎಂದರೆ ಸರಿಯಲ್ಲ. ವಾದಿಗಳು ನನ್ನ ಸಂಬಂಧಿಗಳು ಎಂದರೆ ಸರಿ. 2 ನೇ ವಾದಿ ನನ್ನ ಖಾಸಾ ತಂಗಿ ಎಂದರೆ ಸರಿ. 1 ನೇ ವಾದಿಯು ಎಂದಿಗೂ ವ್ಯವಸಾಯ ಮಾಡಿಲ್ಲ ಎಂದರೆ ಸರಿ. ಆತನು ವ್ಯವಸಾಯದ ಉಪಕರಣಗಳನ್ನು ಇಟ್ಟುಕೊಂಡಿರುವುದಿಲ್ಲ ಎಂದರೆ ಸರಿ. 1 ನೇ ವಾದಿಯು ಎತ್ತಿನ ಶೆಡ್ಡನ್ನು ಹೊಂದಿರುವುದಿಲ್ಲ ಎಂದರೆ ಸಾಕ್ಷಿಯು ಮೊದಲಿಗೆ ಇದ್ದು, ವ್ಯವಸಾಯದಲ್ಲಿ ನಷ್ಟ ಅನುಭವಿಸಿದ್ದರಿಂದ ಈಗ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದನಗಳ ಶೆಡ್ಡನ್ನು 1 ನೇ ವಾದಿಯು ಸುಮಾರು 5-6 ವರ್ಷದ ಹಿಂದೆ ತೆಗೆದಿರುತ್ತಾನೆ.

3. 2 ನೇ ವಾದಿಯಾದ ಕಮಲವ್ವ ರವರನ್ನು ಸಾವೀಕೇರಿ ಗ್ರಾಮದ ವರನಿಗೆ ಮದುವೆ ಮಾಡಲಾಗಿತ್ತು ಎಂದರೆ ಸರಿ. ಆಕೆಯ ಗಂಡನಾದ 1 ನೇ ವಾದಿಗೆ ಸಾವೀಕೇರಿ



ಗ್ರಾಮದಲ್ಲಿ ಜಮೀನುಗಳು ಮತ್ತು ಮನೆ ಇವೆ ಎಂದರೆ ಸಾಕ್ಷಿಯು ಕೇವಲ ಮನೆ ಮಾತ್ರ ಇದೆ ಎಂದು ನುಡಿಯುತ್ತಾರೆ. ರಾಮಾಪುರ ಗ್ರಾಮದಲ್ಲಿ ನಾಗಪ್ಪ ತಂದೆ ಪುಟ್ಟಪ್ಪ ನಿಂಬಣ್ಣನವರು ಇದ್ದಾರೆ ಎಂದರೆ

ಸರಿ. ಅದೇ ರೀತಿ ಸಿದ್ದಪ್ಪ ತಂದೆ ರಾಮಪ್ಪ ನಿಂಬಣ್ಣನವರು ಸಹ ಇದ್ದಾರೆ. ಅವರ ಆಸ್ತಿಗಳು ಆಸ್ತಿ ಸಂಃ 45 ರ ಪಶ್ಚಿಮ ದಿಕ್ಕಿಗೆ ಇವೆ ಎಂದರೆ ಸಾಕ್ಷಿಯು ಹೂ ಅನ್ನುತಾರೆ. ಆಸ್ತಿ ಸಂಃ 45 ರ ಪೂರ್ವಕ್ಕೆ ಪಕ್ಕೀರಪ್ಪ ತಂದೆ ತುಳಜಪ್ಪ ಗಾಯಕವಾಡ ರವರಿಗೆ ಸೇರಿದ ಆಸ್ತಿ ಸಂಃ 45/ಬಿ ಇದೆ ಎಂದರೆ ಸಾಕ್ಷಿಯು ಮೊದಲಿಗೆ ಪೂರ್ವಕ್ಕೆ ರಸ್ತೆ ಇದ್ದು ಆ ರಸ್ತೆ ನಂತರ ಪಕ್ಕೀರಪ್ಪ ಗಾಯಕವಾಡ ರವರ ಆಸ್ತಿ ಇದೆ ಎಂದು ನುಡಿಯುತ್ತಾರೆ.

4. ಆಸ್ತಿ ಸಂಃ 45/ಸಿ ನಕುಲಪ್ಪ ತಂದೆ ಗುರುಲಿಂಗಪ್ಪ ಅವರ ಹೆಸರಿನಲ್ಲಿ ರಾಮಾಪುರ ಗ್ರಾಮದಲ್ಲಿ ಇದೆ ಎಂದರೆ ಸಾಕ್ಷಿಯು ನಕುಲಪ್ಪನಿಗೆ ರಾಮಾಪುರ ಗಾಮದಲ್ಲಿ ಆಸ್ತಿಯು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ನಕುಲಪ್ಪರವರ ಹೆಸರಿನಲ್ಲಿ ಇದೆ ಎಂದು ಆಲದಕಟ್ಟಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಉತಾರವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಆತನಿಗೆ ರಾಮಾಪುರ ಗ್ರಾಮದಲ್ಲಿ ಯಾವುದೇ ಆಸ್ತಿಗಳು ಇಲ್ಲದಿದ್ದರೂ ಹೇಗೆ ಉತಾರವನ್ನು ನೀಡಿರುತ್ತಾರೆ ಎಂದು ಹೇಳುತ್ತಾರೆ. ನಕುಲಪ್ಪನ ಹೆಸರಿನಲ್ಲಿ ಆಸ್ತಿ ಸಂಃ 45/ಸಿ ರಾಮಾಪುರ ಗ್ರಾಮದಲ್ಲಿ ಇದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ದುರುಗವ್ವ ಕೋಂ ಸಣ್ಣದುರುಗಪ್ಪ ಬೇವಿನಹಳ್ಳಿ ರವರು ರಾಮಾಪುರ ಗ್ರಾಮದಲ್ಲಿ ಇದ್ದಾರೆ ಎಂಬ ಸೂಚನೆಗೆ ಸಾಕ್ಷಿಯು ಆಕೆ ಮೊದಲಿಗೆ ಇದ್ದು, ಈಗ ದ್ಯಾಮನಕೊಪ್ಪ ಗ್ರಾಮದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಆಕೆಗೆ ಸಂಬಂಧಿಸಿದ ಆಸ್ತಿಯಾದ ವಿಪಿಸಿ ಆಸ್ತಿ ಸಂಃ 46 ಸದರಿ ನಕುಲಪ್ಪ ರವರ ಆಸ್ತಿಯ ಪೂರ್ವ ಭಾಗದಲ್ಲಿ ಇದೆ ಎಂದರೆ ಸಾಕ್ಷಿಯು ಆಕೆಯ ಯಾವುದೇ ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆಕೆಯ ಆಸ್ತಿ ನಕುಲಪ್ಪನ ಆಸ್ತಿಯ ಪೂರ್ವ ಭಾಗದಲ್ಲಿ ಇದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಪಿಸಿ ಆಸ್ತಿ ಸಂಃ 44 ರಿಂದ 47 ರವರೆಗೆ ಇರುವ ಆಸ್ತಿಗಳು ಪಂಚಾಯಿತಿ ರಸ್ತೆಯ ಉತ್ತರ ದಿಕ್ಕಿನಲ್ಲಿ ಸಾಲಾಗಿ ಇರುತ್ತವೆ ಎಂದರೆ ಸರಿ. ಪ್ರತಿವಾದಿಗಳ ಆಸ್ತಿಗಳು ಸದರಿ ರಸ್ತೆಯ ದಕ್ಷಿಣ ಭಾಗದಲ್ಲಿ ಸಾಲಾಗಿ ಬರುತ್ತವೆ ಎಂದರೆ ಸರಿಯಲ್ಲ.



6. ರಾಮಾಪುರ ಗ್ರಾಮದ ಸರಕಾರಿ ಶಾಲೆ, ಹುಸೇನಸಾಬನ ಆಸ್ತಿ, ಅಂಗನವಾಡಿ ಮತ್ತು ಪ್ರತಿವಾದಿಗಳ ಆಸ್ತಿಗಳು ಡಾಂಬಾರ ರಸ್ತೆಯ ದಕ್ಷಿಣ ದಿಕ್ಕಿಗೆ ಸಾಲಾಗಿ ಇರುತ್ತವೆ ಎಂದರೆ ಸರಿ. ವಾದಿಗಳ ಆಸ್ತಿಯು ರಸ್ತೆಯ ಉತ್ತರ ದಿಕ್ಕಿನಲ್ಲಿದ್ದು ಮತ್ತು ಪ್ರತಿವಾದಿಗಳ ಆಸ್ತಿಯು ರಸ್ತೆಯ ದಕ್ಷಿಣ ದಿಕ್ಕಿಗೆ ಇರುವುದರಿಂದ ದಾವಾ ಆಸ್ತಿಗಳನ್ನು ವಹಿವಾಟಿಸಲು ಹರಕತ್ತು ಮಾಡಲು ಪ್ರಶ್ನೆಯೇ ಇರುವುದಿಲ್ಲ ಎಂದರೆ ಸಾಕ್ಷಿಯು ನೇರವಾದ ಉತ್ತರವನ್ನು ನೀಡದೇ ಅಸಂಬದ್ಧ ಉತ್ತರ ನೀಡುತ್ತಾರೆ. 1 ನೇ

ವಾದಿಯು ನನ್ನ ತಂಗಿಯಾದ 2 ನೇ ವಾದಿಯಾದ ಗಂಡನು ಇರುವುದರಿಂದ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರು 6 ಅಡಿ ಜಾಗವನ್ನು ಬಿಟ್ಟಿರುವುದಿಲ್ಲ ಮತ್ತು ಅಲ್ಲಿ ಯಾವುದೇ ಕೃಷಿ ಸಲಕರಣೆಗಳನ್ನು ಮತ್ತು ದನದ ಶೆಡ್ಡನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್

ಸಾಕ್ಷಿದಾರರ ಸಹಿ

ಪಿ.ಡಬ್ಲ್ಯೂಃ 5

ದಿನಾಂಕ 19-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜಿ.ಎಸ್.ಕೆ ವಕೀಲರಿಂದಃ</u>**

1. ನಾನು ಇಂದು ಸಾಕ್ಷಿಯನ್ನು ನುಡಿಯಲು ನಿಂಬಣ್ಣರವರೊಂದಿಗೆ ಬಂದಿರುತ್ತೇನೆ. ನನ್ನ ತಂದೆ 2 ನೇ ವಾದಿಯ ದೊಡ್ಡಮ್ಮನ ಮಗ ಎಂದರೆ ಗೊತ್ತಿಲ್ಲ. 2 ನೇ ವಾದಿಯು ಸಂಬಂಧದಲ್ಲಿ ನನ್ನ ಅತ್ತೆ ಎಂದರೆ ಸರಿ. ದಾವಾ ಆಸ್ತಿಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಗಳು ನಾಗಪ್ಪ ಮತ್ತು ಪುಟ್ಟಣಪ್ಪ ನಿಂಬಣ್ಣನವರವರ ಆಸ್ತಿಗಳ ಪಕ್ಕದಲ್ಲಿ ಬರುತ್ತವೆ ಎಂದರೆ ಸರಿ. ನಾಗಪ್ಪ ಮತ್ತು ಪುಟ್ಟಪ್ಪ ರವರ ಆಸ್ತಿಗಳ ಸಂಖ್ಯೆ 44 ಎಂದರೆ ಗೊತ್ತಿಲ್ಲ ಮತ್ತು ಅವರ ಆಸ್ತಿಗಳನ್ನು ನಾನು ನೋಡಿರುವುದಿಲ್ಲ. ಸದರಿಯವರ ಆಸ್ತಿಗಳ ಪೂರ್ವ ದಿಕ್ಕಿಗೆ ವಾದಿಯರ ದಾವಾ ಆಸ್ತಿಗಳು ಬರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪೂರ್ವಕ್ಕೆ ಪಕ್ಕೀರಪ್ಪ ಗಾಯಕವಾಡ ನಂತರ ನಕುಲಪ್ಪ ನಿಂಬಣ್ಣನವರ ನಂತರ ದುರುಗವ್ವ ಬೇವಿನಹಳ್ಳಿ ಮತ್ತು ಮೂಕಪ್ಪ ಹನಕನಹಳ್ಳಿ ರವರ ಆಸ್ತಿಗಳು ಬರುತ್ತವೆ ಎಂದರೆ ಸರಿಯಲ್ಲ. ಸದರಿಯವರ ಆಸ್ತಿಗಳೆಲ್ಲವೂ ಸರಕಾರಿ ಶಾಲೆಯ ಮುಂಭಾಗದಲ್ಲಿ ಇರುವ ರಸ್ತೆಯ ಉತ್ತರ ದಿಕ್ಕಿಗೆ ಬರುತ್ತವೆ ಎಂದರೆ ಸರಿ.

2. ರಾಮಾಪುರ ಗ್ರಾಮದ ಸರಕಾರಿ ಶಾಲೆಯ ಆಸ್ತಿ ಸಂಃ1 ಎಂದರೆ ಸರಿ. ಅಂಗನವಾಡಿ ಇರುವ ಆಸ್ತಿ ಸಂಃ 1/1 ಎಂದರೆ ಸರಿ. 2 ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿ 3 ಎಂದರೆ ಸರಿ. ಹುಸೇನಸಾಬ ಜಾನಕೊಪ್ಪ ರವರ ಹೆಸರಿನಲ್ಲಿ ಆಸ್ತಿ ಸಂಃ4 ಎಂದರೆ ಸರಿ. ಸದರಿ ಶಾಲೆ, ಅಂಗನವಾಡಿ, ಪ್ರತಿವಾದಿಗಳ ಆಸ್ತಿಗಳು ಮತ್ತು ಹುಸೇನಸಾಬ ರವರ ಆಸ್ತಿ ಸದರಿ ಸರಕಾರಿ ರಸ್ತೆಯ ದಕ್ಷಿಣ ಭಾಗದಲ್ಲಿ ಒಂದೇ ಸಾಲಿನಲ್ಲಿ ಬರುತ್ತವೆ ಎಂದರೆ ಸರಿ. ಆಸ್ತಿ ಸಂಃ 44 ರಿಂದ 47 ರ ಆಸ್ತಿಗಳು ಸರಕಾರಿ ರಸ್ತೆಯ ಉತ್ತರ ದಿಕ್ಕಿಗೆ ಇವೆ ಎಂದರೆ ಸಾಕ್ಷಿಯು ದಕ್ಷಿಣ ದಿಕ್ಕಿಗೆ ಇವೆ ಎಂದು ನುಡಿಯುತ್ತಾರೆ. ಅವುಗಳು ಉತ್ತರ ದಿಕ್ಕಿಗೆ ಇದ್ದರೂ ದಕ್ಷಿಣ ದಿಕ್ಕಿಗೆ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸದರಿ ರಸ್ತೆಯ ಉತ್ತರ ದಿಕ್ಕಿನಲ್ಲಿ ಇದ್ದು ಮತ್ತು ಪ್ರತಿವಾದಿಗಳ ಆಸ್ತಿಗಳು ರಸ್ತೆಯ ದಕ್ಷಿಣ ದಿಕ್ಕಿನಲ್ಲಿ ಇದ್ದರಿಂದ ದಾವಾ

ಆಸ್ತಿಗಳನ್ನು ವಹಿವಾಟು ಮಾಡಲು ಪ್ರತಿವಾದಿಯರು ತೊಂದರೆ ಕೊಡುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ.

3. 1 ನೇ ವಾದಿಯು ಮೂಲತಃ ಸಾವೀಕೇರಿ ಗ್ರಾಮದವನು ಎಂದರೆ ಗೊತ್ತಿಲ್ಲ. 1 ನೇ ವಾದಿಯು ಕೃಷಿ ಚಟುವಟಿಕೆಗಳನ್ನು ಮಾಡುವುದಿಲ್ಲ ಎಂದರೆ ಸಾಕ್ಷಿಯು ಮೊದಲು ಮಾಡುತ್ತಿದ್ದು ಈಗ ಮಾಡುತ್ತಿದ್ದಾನೋ ಅಥವಾ ಇಲ್ಲವೋ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಿಳುವಳಿಕೆಯಿಂದಲೂ 1 ನೇ ವಾದಿ ವ್ಯವಸಾಯ ಮಾಡುತ್ತಿರುವ ಬಗ್ಗೆ ನನಗೆ ಗೊತ್ತಿದೆ. ವಾದಿಗಳು ಪ್ರಸ್ತುತ ಬಂಕಾಪುರ ಗ್ರಾಮದಲ್ಲಿ ಕಳೆದ 5-6 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಅದಕ್ಕೂ ಪೂರ್ವದಲ್ಲಿ ಸುಮಾರು 7-8 ವರ್ಷಗಳಿಂದ ಮಾಸನಕಟ್ಟಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ನೇ ವಾದಿಯು ಎಂದಿಗೂ ಲಾವಣಿ ಆಧಾರದ ಮೇಲೆ ವ್ಯವಸಾಯ ಮಾಡಿರುವುದಿಲ್ಲ ಮತ್ತು ಕೃಷಿಯ ಸಲಕರಣೆಗಳನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ.

4. 1 ನೇ ವಾದಿಯು ದನದ ಶೆಡ್ಡನ್ನು ನಿರ್ಮಾಣ ಮಾಡಿರಲಿಲ್ಲ ಎಂದರೆ ಸರಿಯಲ್ಲ. ರಾಮಾಪುರ ಗ್ರಾಮದಲ್ಲಿ ಎಂದಿಗೂ 1 ನೇ ವಾದಿಯು ದನದ ಶೆಡ್ಡನ್ನು ನಿರ್ಮಾಣ ಮಾಡಿರುವುದಿಲ್ಲ, ವ್ಯವಸಾಯ ಮಾಡಿರುವುದಿಲ್ಲ ಮತ್ತು ವ್ಯವಸಾಯದ ಉಪಕರಣಗಳನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪೂ-ಪ- 36 ಅಡಿಗಳು, ಉ-ದ- 110 ಅಡಿಗಳು ಇವೆ. ದಾವಾ ಆಸ್ತಿಗಳನ್ನು ವಾದಿಗಳಿಗೆ ಹೇಗೆ ಬಂದಿರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ಮೊದಲಿಗೆ ದಾವಾ ಆಸ್ತಿಗಳು ಮತ್ತು ಅಕ್ಕಪಕ್ಕ ಗ್ರಾಮ ಠಾಣಾ ಆಸ್ತಿಗಳಾಗಿದ್ದು, ಅದರಲ್ಲಿ ಪಂಚಾಯಿತಿಯವರ ಅನುಮತಿಯಂತೆ ಎಲ್ಲರೂ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅವುಗಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳು ಇರುವುದಿಲ್ಲ.

5. ವಾದಿಗಳ ಆಸ್ತಿಗೆ ಜಿಪಿಸಿ ಸಂಃ 45/ಎ, 45/ಎ 1 ಎಂದು ಸಂಖ್ಯೆಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ನೀಡಿರುವ ಬಗ್ಗೆ ನಾನು ಮುಖ್ಯ ವಿಚಾರಣಾ



ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಗ್ರಾಮದಲ್ಲಿ ಅಳತೆ ಮಾಡಲು ಬಂದಾಗ ಸದರಿ ಸಂಖ್ಯೆಗಳು ನನಗೆ ಗೊತ್ತಾಗಿದ್ದು ಅದರಂತೆ ಬರೆಸಿರುತ್ತೇನೆ. ಸದರಿ ಅಳತೆಯನ್ನು ಮಾಡಲು ಸರಕಾರಿ ಅಧಿಕಾರಿಗಳು ಬಂದಿದ್ದು, ಅವರ ಹೆಸರುಗಳು ಗೊತ್ತಿಲ್ಲ. ಸದರಿ ಅಳತೆಯನ್ನು ಮಾಡಲು ಬಂದಿದ್ದರು ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ನನಗೆ ಸಂಬಂಧಿಗಳು ಇರುವುದರಿಂದ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು

ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ.

ಸಾಕ್ಷಿದಾರರ ಸಹಿ